ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕುಟುಂಬಗಳಿಗೆ

ಸ್ವಚ್ಛ ಭಾರತ್ ಮಿಷನ್	ಪ್ರೋತ್ಸಾಹಧನ	ರೂ. 12,000/–
ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಿಂದ	ಅನುದಾನ	ರೂ. 4,000/–
ಎಸ್‌ಸಿಪಿ & ಟಿಎಸ್‌ಯಡಿ	ಅನುದಾನ	ರೂ. 3,000/–
ಫಲಾನುಭವಿವಂತಿಗೆ	–	ರೂ. 1,000/–
ಒಟ್ಟು	–	ರೂ. 20,000/–

ರಾಜ್ಯ ಮಹಿಳಾ ಆಯೋಗ

2439(3418); ಶ್ರೀ ಚೆಲುವರಾಯಸ್ವಾಮಿ ಎನ್.

ಅ) 2012, 2013 ಮತ್ತು 2014ನೇ ಸಾಲಿನಲ್ಲಿ ರಾಜ್ಯ ಮಹಿಳಾ ಆಯೋಗಕ್ಕೆ ವಿಚಾರಣೆ ಕೋರಿ ಬಂದಿರುವ ದೂರುಗಳು ಮತ್ತು ಮನವಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ವಿಚಾರಣೆ ನಡೆಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ (ಜಿಲ್ಲಾವಾರು ವಿವರ ಒದಗಿಸುವುದು);

ಆ) ಮಹಿಳಾ ಆಯೋಗಕ್ಕೆ ಮಂಜೂರಾಗಿರುವ ಮತ್ತು ಹಾಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

ಆಯೋಗಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನು ಒದಗಿಸಿ ಪ್ರಕರಣಗಳ ತ್ವರಿತ ವಿಲೇವಾರಿಗೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಬಂದ ದೂರುಗಳು/ ಮನವಿಗಳ ಮಾಹಿತಿ ಕೆಳಕಂಡಂತಿದೆ.

ಕ್ರ.ಸಂ	ವರ್ಷ	ದೂರುಗಳು/ ಮನವಿಗಳು
1	2012	785
2	2013	1828
3	2014	1654

ಆಯೋಗಕ್ಕೆ ಸಲ್ಲಿಸಿದ ದೂರುಗಳನ್ನು ಸಮಾಲೋಚನೆ ಮೂಲಕ ಮತ್ತು ಸಂಬಂಧಿಸಿದ ದೂರುಗಳಿಗೆ ವರದಿ ತರಿಸಿಕೊಂಡು ಆಯೋಗದಲ್ಲಿ ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದೆ. 5 ಪ್ರಕರಣಗಳಲ್ಲಿ ವಿಚಾರಣೆ ನಡೆಸಿ ಸೂಕ್ತ ಕ್ರಮಕ್ಕಾಗಿ ವರದಿ ಸಲ್ಲಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

ಆ) ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ 18.

ಇಬ್ಬರು – ಅಧಿಕಾರಿಗಳು,

ಇಬ್ಬರು – 'ಸಿ' ಗುಂಪಿನ ಸಿಬ್ಬಂದಿಗಳು,

3 ಜನ – ಕೋ–ಟರ್ಮಿನಸ್, ಆಧಾರದಲ್ಲಿ ಅಧ್ಯಕ್ಷರ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

11 ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ಬಾಹ್ಯ ಮೂಲದಿಂದ ಪಡೆದುಕೊಂಡಿದೆ.

ಲಭ್ಯವಿರುವ ಸಿಬ್ಬಂದಿಗಳಿಂದ ಪ್ರಕರಣದ ವಿಲೇವಾರಿಗೆ ಕ್ರಮ ವಹಿಸಲಾಗುತ್ತಿದೆ.

ಅನುಬಂಧ

ಜಿಲ್ಲಾವಾರು ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ಸಲ್ಲಿಸಿರುವ ವಿವರ

ಕ್ರ.ಸಂ	ದಿನಾಂಕ	ವಿವರ	ಜಿಲ್ಲೆ
1	17.10.2014	ಮೈಸೂರಿನ ಎ.ಟಿ.ಐ ನಿರ್ದೇಶಕಿ ರಶ್ಮಿ ಮಹೇಶ್ ರವರ ಮೇಲೆ ನಡೆದ ಹಲ್ಲೆ ಪ್ರಕರಣ.	ಮೈಸೂರು
2	08.11.2014	ತೀರ್ಥಹಳ್ಳಿ ತಾ: ಶಾಲಾ ವಿದ್ಯಾರ್ಥಿನಿಯಾದ ನಂದಿತಾ ಸಾವಿನ ಪ್ರಕರಣ.	ಶಿವಮೊಗ್ಗ
3	24.11.2014	ಮೆಟ್ರೋ ನಿಲ್ದಾಣದಲ್ಲಿ ಮಹಿಳೆಯರಿಗೆ ಶೌಚಾಲಯ ಇಲ್ಲದಿರುವ ಕುರಿತು.	ಬೆಂಗಳೂರು
4	06.12.2014	ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಂದ ಬಂದ ದೂರರ್ಜಿಯ ಸಂಬಂಧ.	ಬೆಂಗಳೂರು
5	19.12.2014	24 ವರ್ಷಗಳಿಂದ ಗೃಹಬಂಧನದಲ್ಲಿದ್ದ ಸ್ಮಿತಾ ಎಂಬ ಯುವತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಭೇಟಿ ನೀಡಿದ ವಿವರ	ಬೆಂಗಳೂರು